ಭಾವನೆ ಇರುವ ಇಬ್ಬರ ನಡುವೆ ಅಥವಾ ಎರಡು ಗುಂಪುಗಳ ನಡುವೆ ಇರುವಂಥದು. ಆದರೆ ಅವ್ಯಕ್ತವಾದುದನ್ನು ಮತ್ತು ಅಗೋಚರವಾದುದನ್ನು 'ಸಿಕ್ಕಿತು ಎಂದು ಅಥವಾ ಸಿಗಲಿಲ್ಲ ಎಂದು ಹೇಳುವುದು ಒಂದು ಭಾವನೆಯಾಗಿರಲಿ, ಭ್ರಮೆಯಾಗಿರಲಿ ಎರಡೂ ಒಂದೇ, ಗೌರವ, ಮಾನ ಅವಮಾನ ಎಲ್ಲವೂ ಒಂದೋ ಭಾವನೆ ಅಥವಾ ಭ್ರಮೆ ಅಲ್ಲವೆ ಅಭಿ?' ಎಂದು ಗುರು ಅಕ್ಷರಿ, ಸ್ವಲ್ಪ ಹೊತ್ತು ಯೋಚಿಸಿ, 'ಹೌದು ಅಭಿ. ನೀನು ಯೋಚಿಸಿ ನೋಡು. ಏಕವಚನದಲ್ಲಿ ಮಾತಾಡುವುದರಲ್ಲಿ ಒಂದು ಆತ್ಮೀಯತೆ, ಒಂದು ಥ್ರಿಲ್ ಇದೆ, ಬಹುವಚನದಲ್ಲಿ ಇಲ್ಲ' ಎಂದ ಗುರು ಅಕ್ಷರಿ.

'ನಿಜ ಅಕ್ಷರಿ, ಆದರೆ ತನ್ನನ್ನು ತಾನೇ ದೈವಾಂಶ ಸಂಭೂತ ಎಂದು ಗುರುತಿಸಿಕೊಂಡು ತನ್ನ ಹೆಸರಿನ ಜೊತೆ ಅಲಂಕಾರಿಕವಾದ ಉದ್ದುದ್ದ ಉಪಾಧಿಗಳನ್ನು ಇರಿಸಿಕೊಳ್ಳುವರು ಇದ್ದಾರಲ್ಲಾ, ಅವರು ಯಾರು?' ಅಭಿ ಕೇಳಿದ.

'ಅವರು ಮಾರುತ ವಂಶಜರು, ಗಾಳಿಯಂತೆ ಎಲ್ಲಿಯೂ ಕಾಣಿಸದವರು, ನಿಜ ನಿನ್ನ ನನ್ನಂಥ ಮಾನವರ ಕೈಗೆ ಸಿಗದವರು' ಎಂದು ನಕ್ಕು ಅಕ್ಷರಿ, 'ಅವರು ಎಲ್ಲವನ್ನೂ ಎಲ್ಲರನ್ನೂ ತಿಳಿದುಕೊಂಡಿದ್ದೇವೆ ಎಂದು ಭಾವಿಸುವ, ತನ್ನನ್ನು ತನ್ನನ್ನು ತಾನೇ ಅರೆಬರೆಯಾಗಿ ತಿಳಿದುಕೊಂಡವರು ಅಥವಾ ಶುದ್ಧ ಅಜ್ಞಾನಿಗಳು. ಅವರು 'ಇದ್ದೇವೆ' ಎಂದುಕೊಂಡಿರುವ ಪ್ರಪಂಚವೇ ಬೇರೆ, ಅವರು ಯಾರು ಎಂಬ ಬಗ್ಗೆ ನಾವು ಯೋಚಿಸುವುದೇ ಇಲ್ಲ' ಎಂದು ತುಸು ತಡೆದು, ಅಕ್ಷರಿ, 'ಇಲ್ಲಿ ನೀನು ಏನನ್ನು ಹುಡುಕುತ್ತಿರುವೆ ಅಭಿ?' ಎಂದು ಕೇಳಿದ.

'ನಾನು ದೇವರನ್ನು ಹುಡುಕುತ್ತಿರುವೆ. ನನಗೆ ಅಪ್ಪ ಎಂದರೆ ದೇವರು'

'ತಿಳಿಯಿತು ನಿನ್ನ ಎದೆಯ ಮೇಲಿನ ಬರಹ ಅದನ್ನೇ ಹೇಳುತ್ತದೆ. ಆದರೆ ಹೇಗೆ ನಿನ್ನ ಅಪ್ಪನನ್ನು ಹೇಗೆ ಕಂಡುಹಿಡಿಯುತ್ತಿ?' ಗುರು ಅಕ್ಷರಿ ಕೇಳಿದ.

'ಕಂಡು ಹಿಡಿಯಲೇ ಬೇಕು ಗುರು. ಸಿಗುತ್ತಾನೆ ಎಂಬ ವಿಶ್ವಾಸವಿದೆ ನನಗೆ'

'ಗೊತ್ತಿಲ್ಲ ಗುರು, ಹುಡುಕುತ್ತಾ ಇರುತ್ತೇನೆ. ಭೂಮಿಗೆ ಒಂದು ಸುತ್ತು ಹೋಗಬೇಕಾದರೂ ಕೂಡ' ಎಂದ.

'ನಿನಗೆ ಯಶ ಲಭಿಸಲಿ' ಎಂದು ಅಭಿಯ ತಲೆ ಮುಟ್ಟಿ ಆಶೀರ್ವದಿಸಿದ ಗುರು ಅಕ್ಷರಿ. ಗುರು ಅಕ್ಷರಿಯನ್ನು ವಂದಿಸಿ ಅಭಿ ಹೊರಟುಹೋದ.

ಯಾರ ಬಳಿಯೂ ಮಾತಾಡುವುದರಿಂದ ಪ್ರಯೋಜನವಿಲ್ಲ. ಹುಡುಕುತ್ತಾ ಹೋಗಬೇಕು ಎಂದು ಅಭಿ ಕೇದಾರನಾಥದಿಂದ ಋಷಿಕೇಶಕ್ಕೆ ಬಂದ.


ಮೂರು ತಿಂಗಳ ಕಾಲ ಋಷಿಕೇಶದಲ್ಲಿ ಸುತ್ತಾಡಿ ಹರಿದ್ವಾರಕ್ಕೆ ಬಂದ. ಹರಿದ್ವಾರದಲ್ಲಿ ಮೂರು ತಿಂಗಳು ಸುತ್ತಾಡಿ ಕಾಶ್ಮೀರದಲ್ಲಿ ವೈಷ್ಣವೋದೇವಿ ದೇವಾಲಯವನ್ನು ಸಂದರ್ಶಿಸಿ, ಅಲ್ಲಿ ಒಂದು ತಿಂಗಳು ಕಳೆದು ವಾರಣಾಶಿಗೆ ಬಂದ. ಇನ್ನು ಹುಡುಕಿದ್ದು ಸಾಕು, ಇಲ್ಲೂ ಸಿಗದಿದ್ದರೆ ಮುಂದೇನು ಎಂದು ಯೋಚಿಸಬೇಕು ಎಂದುಕೊಂಡು ವಾರಣಾಶಿಯಲ್ಲಿ ಎಲ್ಲಾ ಕಡೆ ಹೋದ. ಸುತ್ತಾಟದಲ್ಲಿ ಒಂದು ವರ್ಷ ಕಳೆದು ಹೋಯಿತು. ಅಭಿ ಹತಾಶನಾಗಲಿಲ್ಲ ಅಪ್ಪ ಇಲ್ಲೇ ಎಲ್ಲಾದರೂ ಸಿಗುತ್ತಾರೆ ಎಂಬ ವಿಶ್ವಾಸ ಮರಳುತ್ತಲೇ ಇತ್ತು.

ಒಂದು ದಿನ ಅಭಿ ಗಂಗಾನದಿ ದಂಡೆಯಲ್ಲಿ ನಿಂತು ಗಂಗಾನದಿ ಮತ್ತು ಅದರಾಚೆಗಿನ ವಿಹಂಗಮ ದೃಶ್ಯವನ್ನು ವೀಕ್ಷಿಸುತ್ತಿದ್ದ. ಹತ್ತಿರದಲ್ಲೇ ಒಂದು ಕಡೆ ಒಬ್ಬ ವೃದ್ಧ ಜಟಾಜೂಟಧಾರಿ ಮತ್ತು ಒಬ್ಬ ಸುಮಾರು ನಲ್ವತ್ತರ ವಯಸ್ಸಿನ ಮನುಷ್ಯ ನದಿಯ ದಂಡೆಯಲ್ಲಿ ಒಂದು ಕಡೆ ಕುಳಿತು ಮಾತಾಡುತ್ತಿರುವುದು ಅವನ ಗಮನಕ್ಕೆ ಹೋಯಿತು. ಅವರ ಮಾತಿನ ಒಂದೆರಡು ಶಬ್ದಗಳು ಕಿವಿಗೆ

## ದುಬಾರಿ

ಅವಳ
ಮಾತು ಬೆಳ್ಳಿ
ಮೌನ ಬಂಗಾರ
ಕಿವಿ ಮಾತ್ರ
ಹಿತ್ತಾಳೆ..!

★ ರಾಂಚಂದ್ರ ಕೊಪ್ಪಲು




ಬಿದ್ದಾಗ ಅಸ್ಪಷ್ಟವಾಗಿದ್ದರೂ ಅದು ಕನ್ನಡ ಭಾಷೆಯೆಂದನಿಸಿ ಅಭಿ ನಿಧಾನವಾಗಿ ಅವರ ಸಮೀಪ ಹೋದ. ಅದು ಕನ್ನಡವೆಂದು ಖಚಿತವಾಗಿ, 'ಕ್ಷಮಿಸಿ. ನಿಮ್ಮ ಬಳಿ ನನಗೆ ಒಂದೆರಡು ವಿಷಯ ತಿಳಿದುಕೊಳ್ಳಬೇಕಾಗಿದೆ. ಕೇಳಬಹುದೆ?' ಎಂದ. ಅವರಿಬ್ಬರೂ ಉಲ್ಲಸಿತರಾಗಿ 'ಖಂಡಿತ ಕೇಳಬಹುದು. ಬನ್ನಿ ಮಾತಾಡೋಣ. ಎಲ್ಲಿಂದ ಬಂದಿರಿ?' ಎಂದು ನಡುವಯಸ್ಸಿನ ವ್ಯಕ್ತಿ ಕನ್ನಡದಲ್ಲಿ ಮತಾಡಿದ.

'ನಾನು ಕರ್ನಾಟಕದಿಂದ ಬಂದೆ ಸ್ವಾಮೀಜಿ' ಅಭಿಯೆಂದ.

'ನನ್ನನ್ನು ಸ್ವಾಮಿಜಿ ಎನ್ನಬೇಡಿ. ನಾನು ವಿರಕ್ತ ಹೌದು. ಗುರು 'ಶಾಂತಿ' ಎಂದು ಕರೆದರೆ ಸಾಕು. ಶಾಂತಿ ನನ್ನ ಹೆಸರು. ಗುರು ಎಂಬ ಶಬ್ದಕ್ಕೆ ಏನೂ ಅರ್ಥವಿಲ್ಲ. ಸಂಬೋಧನಾ ಶಬ್ದವಿಲ್ಲದೆ ನೇರವಾಗಿ ಮಾತಾಡಿದರೂ, ಆಗುತ್ತೆ. ಕೇವಲ ಶಾಂತಿ ಎಂದು ಕರೆದರೂ ಆಗುತ್ತೆ. ನನ್ನಂಥವರು ಇಲ್ಲಿ ಸಾವಿರಾರು ಮಂದಿ ಇದ್ದಾರೆ. ನಾವು ನಮ್ಮ ಬಗ್ಗೆ ನಾವು ಮುಕ್ತಜೀವಿಗಳು ಎಂಬ ಭಾವನೆ ಇಟ್ಟುಕೊಂಡಿದ್ದೇವೆ. ಮುಕ್ತ ಜೀವಿಗಳು ಎಂಬ ಗುರುತಾಗಿ ಹಿಂದೆ ಮಹಾಮಹಿಮ ಮುಕ್ತಜೀವಿಗಳು ಧರಿಸುತ್ತಿದ್ದಂಥ ಕಾವಿ ಬಣ್ಣದ ನಿಲುವಂಗಿ ಮತ್ತು ಅದೇ ಬಣ್ಣದ ಶಿರವಸ್ತ್ರ ಅರ್ಥಾತ್ ತಲೆಮುಚ್ಚು ಧರಿಸುತ್ತೇವೆ' ಎಂದು ಮುಗುಳ್ನಕ್ಕು, 'ಇಲ್ಲಿಗೆ ಯಾವಾಗ ಬಂದ್ರಿ?' ಎಂದು ಆತ ಕೇಳಿದ.

ನೇರವಾಗಿ ವಿಷಯಕ್ಕೇ ಧುಮುಕಿದರೆ ಏನಾದರೂ ಪ್ರಯೋಜನವಾದೀತು ಎಂದುಕೊಂಡು, 'ನಾನು ಊರು ಬಿಟ್ಟು ಒಂದು ವರ್ಷ ಕಳೆಯಿತು. ಒಂದು ಕಡೆ ಎಲ್ಲಿಯೂ ತಂಗದೆ ತಿರುಗಾಡುತ್ತಾ ಇದ್ದೇನೆ' ಎಂದ.

'ಏನು, ಒಂದು ವರ್ಷದಿಂದ ತಿರುಗಾಡುತ್ತಾ ಇದ್ದೀರಾ? ಯಾಕೆ?' ಸನ್ಯಾಸಿಯಂತಿದ್ದ ದೀರ್ಘ ಕಾಯದ ಗುರು ಶಾಂತಿ ಕೇಳಿದ.

'ನನ್ನನ್ನು ಹುಚ್ಚ ಅಂತ ತಿಳೀಬೇಡಿ. ಒಂದು ವರ್ಷದಿಂದ ನಾನು ನನ್ನ ಅಪ್ಪನನ್ನು ಹುಡುಕುತ್ತಿದ್ದೇನೆ' ಎಂದು ಹೇಳಿ ತಾನು ಸಂದರ್ಶಿಸಿದ ಎಲ್ಲಾ ಕ್ಷೇತ್ರಗಳ ಹೆಸರನ್ನು ಹೇಳಿದ.

'ಅದ್ಭುತ ಅದ್ಭುತ!' ಎಂದು ಸನ್ಯಾಸಿ ಗುರು ಶಾಂತಿ ಉದ್ಗರಿಸಿದ. 'ಇನ್ನೂ ಹುಡುಕುತ್ತಿದ್ದೀಯ?' ಆತ ಕೇಳಿದ.

'ಹೌದು' ಅಭಿಯೆಂದ.

'ನಿನ್ನ ಅಪ್ಪನಿಗೆ ಮನೆ ಬಿಟ್ಟು ಹೋಗಲು ಏನು ಕಾರಣ ಎಂದು ನಿನಗೇನಾದರೂ ತಿಳಿದಿದೆಯೆ?' ಗುರು ಶಾಂತಿ ಕೇಳಿದ.

'ಖಚಿತವಾಗಿ ತಿಳಿದಿಲ್ಲ. ಅಪ್ಪ ಯಾರನ್ನು ಸಜ್ಜನರು ಎಂದು ಭಾವಿಸಿದ್ದರೊ ಅವರು ದುರ್ಜನರು ಎಂದರಿವಾಗಿ, ಅಪ್ಪನನ್ನು ಮಾನಸಿಕ ಹಿಂಸೆಗೆ ಗುರಿ ಮಾಡಿದ್ದೇ ಕಾರಣ ಎಂದನಿಸುತ್ತದೆ. ಅಪ್ಪನದು ತುಂಬಾ ಸೂಕ್ಷ್ಮ ಮನಸ್ಸು, ಮಗುವಿನ ಮನಸ್ಸು ಎಂದು ಹೇಳಬಹುದು. ಒಂದೇ ಒಂದು ಕೆಟ್ಟ ಮಾತನ್ನು ಅವರು ಆಡಿದವರಲ್ಲ. ಯಾರನ್ನೂ ದ್ವೇಷಿಸಿದವರಲ್ಲ. ಅವರಿಗೆ ತಿಳಿದಿದ್ದದ್ದು ಮುಗ್ಧವಾದ ಪ್ರೀತಿಯೊಂದೇ. ದೊಡ್ಡ ಮನೆಯೊಂದನ್ನು ಕಟ್ಟಿ ಅದರಲ್ಲಿ ನಮ್ಮೆಲ್ಲರ ಜೊತೆ ಕೂಡಿ ಬದುಕಬೇಕೆಂಬುದು ಅವರ ಬಯಕೆಯಾಗಿತ್ತು. ಅವರ ಮನಸ್ಸಿನಲ್ಲಿ ಅಪಾರವಾದ ನೋವು ಇತ್ತು' ಎಂದು ಅಭಿ ಆ ನೋವಿಗೆ ಕಾರಣವಾದ ಅಪಘಾತದ ಬಗ್ಗೆ ಹೇಳಿದ. ಅನಂತರದ ಘಟನೆಗಳ ಬಗ್ಗೆ ಸಂಕ್ಷಿಪ್ತವಾಗಿ ಹೇಳಿದ.

ಗುರು ಶಾಂತಿ ಹೇಳಿದ, 'ಮನುಷ್ಯ ತನ್ನನ್ನು ತಾನು ಪ್ರೀತಿಸಬಾರದು' ಎಂದು ಬಲ್ಲವರು ಹೇಳುತ್ತಾರೆ. ಆತ್ಮರತಿಯಿರಬಾರದು ಎಂದು ಅದರ ಅರ್ಥ ತನ್ನ ಸ್ವಾಸ್ಥ್ಯವನ್ನು ಕಡೆಗಣಿಸಬೇಕು ಎಂದು ಅಲ್ಲ. ದುರ್ಜನರನ್ನು ದೂರವಿಡು, 'ದುರ್ಜನರಿಂದ ದೂರವಿರು' ಎಂದು ಬಲ್ಲವರು ಹೇಳುತ್ತಾರೆ. ದುರ್ಜನರ ಶಕ್ತಿ ಸಜ್ಜನರ ವೈರಾಗ್ಯಕ್ಕೆ ಕಾರಣವಾಗಬಾರದು. ನಾನು ದುರ್ಜನರನ್ನು ಎದುರಿಸಬೇಕು ಎಂದು ಹೇಳುತ್ತೇನೆ; ಶಸ್ತ್ರವಿಲ್ಲದೆ ಎದುರಿಸಬೇಕು ಎಂದು ಹೇಳುತ್ತೇನೆ. ದುರ್ಜನರನ್ನು ಎದುರಿಸದಿದ್ದರೆ ಅಸಹಾಯಕರ ಸಂಖ್ಯೆ ಜಾಸ್ತಿಯಾಗುತ್ತದೆ. ನಮ್ಮಂಥವರ ಸಂಖ್ಯೆ ವೃದ್ಧಿಸುತ್ತಾ ಹೋಗುತ್ತದೆ. ಇದರಿಂದ ಲೋಕಕ್ಕೆ ಒಳ್ಳೆಯದಾಗುವುದಿಲ್ಲ. ಸಜ್ಜನರ, ಸಚ್ಚರಿತರ ಸಂಖ್ಯೆ ಕುಸಿಯುತ್ತದೆ. ಸಮಾಜ ಕೃಶವಾಗುತ್ತದೆ.

'ವೈರಾಗ್ಯ ಸದ್ಗುಣವಲ್ಲ ಎಂದು ನೀವು ಭಾವಿಸುತ್ತೀರಾ?' ಅಭಿ ಕೇಳಿದ.

ಕೂಡಲೇ ಗುರು ಶಾಂತಿ, 'ನೀವು ಅನ್ನಬೇಡಿ. ನೀನು ಅನ್ನಿ' ಎಂದು ಹೇಳಿ ಗುರು ಶಾಂತಿ ಗುರು ಅಕ್ಷರಿ ಏಕವಚನ ಬಹುವಚನ ಪ್ರಯೋಗದ ಬಗ್ಗೆ ಹೇಳಿದ್ದನ್ನೇ ಗುರು ಶಾಂತಿಯೂ ಹೇಳಿದ.